# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆ: 1/2020

ಅ.ಸಾ. 03

ದೊ.ಸಾ. 05

| | | |
|---|---|---|
| ಸಾಕ್ಷಿಯ ಹೆಸರು | ಃ | ರಾಮಕೃಷ್ಣ ಬಡಿಗೇರ |
| ತಂದೆ ಹೆಸರು | ಃ | ಭಾಸ್ಕರ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಸ್ವಚ್ಛತಾಗಾರ ಸಿಬ್ಬಂದಿ |
| ವಾಸಸ್ಥಳ | ಃ | ದುಬ್ಬನಮರಡಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 30/08/2021 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

2004 ರಿಂದ ಇಲ್ಲಿಯವರೆಗೆ ನಾನು ಹಂಗರಕಿ ಪಂಚಾಯತಯಲ್ಲಿ ಸ್ವಚ್ಛತಾಗಾರ ಎಂದು ಕಾರ್ಯನಿರ್ವಹಿಸುತ್ತಿದ್ದೇನೆ. ಪ್ರಾಸಾ.1 2016 ರಿಂದ 2018 ವರೆಗೆ ಕಾರ್ಯನಿರ್ವಹಿಸಿದ್ದಾರೆ. ನನಗೆ ಪ್ರಾಸಾ.2, ಚಾಸಾ.6 ರಿಂದ 8 ಇವರ ಪರಿಚಯ ಇದೆ. ಅವರು ಪಂಚಾಯತಿಯಲ್ಲಿ ಕೆಲಸ ಮಾಡುತ್ತಾರೆ. ಚಾಸಾ.9 ಆ ಸಮಯದಲ್ಲಿ ಪಂಚಾಯತಿಯ ಅಧ್ಯಕ್ಷರಾಗಿದ್ದರು. ಚಾಸಾ.10 ರಿಂದ 12 ಪಂಚಾಯತಿಯ ಸದಸ್ಯರಾಗಿದ್ದರು. ಚಾಸಾ.13 ಹಂಗರಕಿಯ ನಿವಾಸಿ.

2. ದಿಃ 15/02/2018 ರಂದು ಗ್ರಾಮ ಪಂಚಾಯತಿ ಕಚೇರಿಗೆ ಸ್ಪೇಷಲ್ ಅಡಿಟ್ ಮಾಡಲು ಒಂದು ತಂಡ ಬರುವುದಿತ್ತು. ನಾನು ಮತ್ತು ಪ್ರಾಸಾ.2 ಚಹಾ ಕುಡಿಯಲು ಹೋದೆವು. ನಾವು ಚಹಾ ಕುಡಿದು ವಾಪಸ ಕಚೇರಿಗೆ ಬರುವಾಗ ನಮ್ಮ ಕಚೇರಿಯ ಮುಂದೆ ಸಾಕಷ್ಟು ಜನ ಸೇರಿದ್ದರು. ನಮ್ಮ ಪಂಚಾಯತಿಗೆ ಸಂಬಂಧಿಸಿದ ಓಚರ್ ಗಳು ಮತ್ತು ಫೈಲ್‌ಗಳಿಗೆ ಹಾಗೂ ಸಾರ್ವಜನಿಕರಿಗೆ ಸೇರಿದ ಇತರೆ ಕಾಗದ ಪತ್ರಗಳಿಗೆ ಬೆಂಕಿ ಹತ್ತಿತ್ತು. ನಾನು, ಪ್ರಾಸಾ.2 ಮತ್ತು ಊರಿನ ಜನ ಸೇರಿ ಬೆಂಕಿಗೆ ನೀರು ಹಾಕಿ ನಂದಿಸಿದೆವು. ಕೆಲವು ದಾಖಲೆಗಳು ಪೂರ್ತಿಯಾಗಿ ಸುಟ್ಟಿದ್ದು, ಇನ್ನೂ ಕೆಲವು

ದಾಖಲೆಗಳು ಅರ್ಧ ಮರ್ಧ ಸುಟ್ಟಿದ್ದವು. ಅರ್ಧ ಮರ್ಧ ಸುಟ್ಟ ದಾಖಲೆಗಳನ್ನು ನಾವು ರಟ್ಟಿನ ಬಾಕ್ಸಿನಲ್ಲಿ ಹಾಕಿ ಇಟ್ಟೇವು.

3. ದಾಖಲೆಗಳು ಸುಟ್ಟ ವಿಷಯವನ್ನು ಪ್ರಾಸಾ.2 ರವರು ಪ್ರಾಸಾ.1 ಕ್ಕೆ ತಿಳಿಸಿದರು. ಪ್ರಾಸಾ.1 ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದಾರೆ. ಪೊಲೀಸರು ಸ್ಥಳಕ್ಕೆ ಬಂದು ಪೋಟೋಗಳನ್ನು ತೆಗೆದು ಸುಟ್ಟ ಹಾಳೆಗಳನ್ನು ತೆಗೆದುಕೊಂಡು ಹೋದರು. ಆ ದಿನ ಭಾಗಶಃ ಸುಟ್ಟು ಹೋದ ದಾಖಲೆಗಳನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸಾಕ್ಷಿಗೆ ಮುಮಾ.1 ನ್ನು ತೋರಿಸಲಾಗಿ, ಗುರ್ತಿಸಿದ್ದಾರೆ.

4. ನನಗೆ ಆರೋಪಿಯ ಗುರ್ತು ಇದೆ. ಆರೋಪಿಯನ್ನು ನಾನು ಆ ದಿನ ನೋಡಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ಹೇಳಿದ್ದು, ಕಾರಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ</u>**

5. ಪೊಲೀಸರ ಮುಂದೆ ಹೇಳಿಕೆ ಕೊಡುವಾಗ 'ಹಂಗರಕಿಯ ಉಮೇಶ ತಂದೆ ಶಿವಪ್ಪ ರಾಮಣ್ಣವರ ಈತನು ಏಕಾಏಕಿ ಯಾವುದೋ ದುರುದ್ದೇಶದಿಂದ ಕಂಪೌಂಡ್ ಹಾರಿ, ಆಫೀಸಿನಲ್ಲಿ ಅತೀಕ್ರಮಣ ಪ್ರವೇಶ ಮಾಡಿ, ಒಳಗೆ ಆರ್ಥಿಕ ವರ್ಷದ ಕೊನೆ ಹೊಂದಾಣಿಕೆಗಾಗಿ ಹಾಗೂ ಎನ್ ಎಲ್ ಎಂ ಟೀಮ್ ವಿಸಿಟ್ ಗೆ ಸಂಬಂಧಿಸಿದಂತಹ ಎಲ್ಲಾ ಫೈಲ್‌ಗಳು ಹಾಗೂ ಗ್ರಾಮ ಪಂಚಾಯತಿಯ ಮಹತ್ವಪೂರ್ವಕ ಫೈಲ್ ಮತ್ತು ರಜಿಸ್ಟರ್ಗಳನ್ನು ಹೊರಗೆ ತೆಗೆದುಕೊಂಡು ಬಂದು, ವರಾಂಡ್‌ದಲ್ಲಿಟ್ಟು ನಾವು ಚೀರುವಷ್ಟರಲ್ಲಿ ಎಲ್ಲಾ ಫೈಲ್‌ಗಳ ಗುಂಪಿಗೆ ಬೆಂಕಿ ಹಚ್ಚಿ ಓಡಿ ಹೋದ' ಎಂದು ಪೊಲೀಸರಿಗೆ ನಾನು ನಿಪಿ.3 ರಂತೆ ಹೇಳಿಕೆ ಕೊಟ್ಟಿಲ್ಲ.

6. ಆ ದಿನ ನಾವು ಚಹಾ ಕುಡಿದು ಮರಳಿ ಕಚೇರಿಗೆ ಬಂದಾಗ ಬೆಳಿಗ್ಗೆ 10.45 ರಿಂದ 11.00 ಗಂಟೆಯಾಗಿರಬಹುದು.

7. ಸದರಿ ಉಮೇಶ ತಂದೆ ಶಿವಪ್ಪ ರಾಮಣ್ಣವರ ಈತನು ಯಾವುದೋ ದುರುದ್ದೇಶ ಇಟ್ಟುಕೊಂಡು ನಾವು ಚಹಾ ಕುಡಿಯಲು ಹೋದ ವೇಳೆಯಲ್ಲಿ ಆಫೀಸಿನಲ್ಲಿ ಅತೀಕ್ರಮವಾಗಿ ಪ್ರವೇಶ ಮಾಡಿ, ಒಳ ಹೊಕ್ಕು, ಆಫೀಸಿನಲ್ಲಿ ಹೊಂದಿಸಿ ಇಟ್ಟ ಸರ್ಕಾರಿ ಕಾಗದ ಪತ್ರಗಳಾದ ಕಚೇರಿಯಲ್ಲಿದ್ದ ಎನ್.ಆರ್.ಇ.ಜಿ.ಫೈಲ್‌ಗಳು, 14ನೇ ಹಣಕಾಸು ವರ್ಷದ ಫೈಲ್ ಗಳು, ಸಾದಿಲ್ವಾರ್ ಬಿಲ್‌ಗಳು, ಎಸ್.ಬಿ.ಎಂ. ಶೌಚಾಲಯ ಫೈಲ್‌ಗಳು, ಕಚೇರಿಯ ನಡಾವಳಿಗಳು ಮತ್ತು ಬಸವ ವಸತಿ ಯೋಜನೆ ಫೈಲ್ ಗಳು, ಓಚರ್ ಗಳು, ಮತ್ತು ಇತರ ಫೈಲ್ ಗಳಲ್ಲಿ ಹೊತ್ತುಕೊಂಡು, ಹೊರಗೆ ತಂದು, ವರಾಂಡ್ ದಲ್ಲಿಟ್ಟು, ಅವುಗಳಿಗೆ ಬೆಂಕಿ ಹಚ್ಚಿ, ಸುಟ್ಟು, ಲುಕ್ಸಾನು ಪಡಿಸಿ ಓಡಿ ಹೋದ ಎಂದು ನಿಪಿ.4 ರಂತೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ.

8. ಆ ದಿನ ನಾನು ಚಹಾ ಕುಡಿಯಲು ಹೋಗಿ ಮರಳಿ ಬರುವ ಸಮಯದಲ್ಲಿ ಆರೋಪಿ ದಾಖಲೆಗಳನ್ನು ಹೊರಗೆ ತಂದು ಹಾಕಿ, ಬೆಂಕಿ ಹಚ್ಚಿ, ಸುಡುವುದನ್ನು ನೋಡಿ ನಿಪಿ.3 ಮತುತ 4 ರಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದರೂ ಸಹ ಈ ದಿನ ಆ ರೀತಿ ಹೇಳಿಕೆ ಕೊಟ್ಟಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

9. ಆರೋಪಿ, ನಾನು ಪಂಚಾಯತಿಯಲ್ಲಿ ಕೆಲಸಕ್ಕೆ ಸೇರಿಕೊಂಡ ನಂತರ ಪಂಚಾಯತಿಯಲ್ಲಿ ಕೆಲಸ ಮಾಡಿಲ್ಲ. ಆರೋಪಿ, ನಾನು ಕೆಲಸಕ್ಕೆ ಸೇರುವುದಕ್ಕಿಂತ ಮೊದಲು ಪಂಚಾಯತಿಯಲ್ಲಿ ಕೆಲಸ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ನನಗೆ 4 ರಿಂದ 5 ವರ್ಷಗಳ ಹಿಂದಿನಿಂದ ಪರಿಚಯದವನಾಗಿದ್ದಾನೆ. ಆರೋಪಿ ಪಂಚಾಯತಿಗೆ ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಪಂಚಾಯತಿಯ ಗುತ್ತಿಗೆದಾರನಾಗಿರಲಿಲ್ಲ. ಆರೋಪಿ ಯಾವುದೋ ದುರುದ್ದೇಶದಿಂದ ಪಂಚಾಯತಿಗೆ ಸೇರಿದ ದಾಖಲೆಗಳಿಗೆ ಬೆಂಕಿ ಹಚ್ಚಿ, ನಾಶ ಮಾಡುವ ಪ್ರಯತ್ನ ಮಾಡಿದ್ದು, ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ.ಎನ್ ಹೆಚ್ ಟಿ ವಕೀಲರು ಸಮಯ ಕೋರುತ್ತಾರೆ. ಕಾರಣ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

30/08/2021 (**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.

**ಇಂದು ದಿಃ 07/10/2021 ರಂದು ಸಾಕ್ಷಿ** ರಾಮಕೃಷ್ಣ ಬಡಿಗೇರರವರನ್ನು **ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

10. ಘಟನೆಯ ದಿನ ನಾನು ಚಹಾ ಕುಡಿಯಲು ಹೋದಾಗ ಕಚೇರಿಯಲ್ಲಿ ಯಾರೂ ಇರಲಿಲ್ಲ.

**ಮರುವಿಚಾರಣೆ ಇಲ್ಲ.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

07/10/2021 (**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.